# <u>ಕರ್ನಾಟಕ ಸರ್ಕಾರದ ನಡವಳಿಗಳು</u>

**<u>ವಿಷಯ:</u>** ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಮೇಲುಸ್ತುವಾರಿಗಾಗಿ ಉನ್ನತ ಮಟ್ಟದ ಅಧಿಕಾರಿಗಳನ್ನು ನೇಮಿಸುವ ಬಗ್ಗೆ.

**<u>ಪ್ರಸ್ತಾವನೆ:</u>**

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಸುಮಾರು 72,186 ಹುದ್ದೆಗಳನ್ನು ಭರ್ತಿ ಮಾಡಲು ಅನುಮೋದಿಸಿದ್ದು, ವಿವರಗಳು ಈ ಕೆಳಗಿನಂತಿವೆ

- 2023-24ನೇ ಸಾಲಿನಿಂದ ಇಲ್ಲಿಯವರೆಗೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 40,009 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಸಹಮತಿ ನೀಡಿದೆ.
- ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 32,177 ಹುದ್ದೆಗಳು (ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಶೇಕಡಾ 80 ರಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯು ಈಗಾಗಲೇ ಪರಿಭಾವಿತ ಸಹಮತಿ ನೀಡಿರುತ್ತದೆ)

ಈ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಆಯ್ಕೆ ಪ್ರಾಧಿಕಾರಗಳಿಂದ ಕ್ರಿಯಾ ಯೋಜನೆಗಳನ್ನು ಪಡೆದು ಸಚಿವ ಸಂಪುಟದ ಅನುಮೋದನೆಗೆ ಮಂಡಿಸಲಾಗಿತ್ತು. ಸಚಿವ ಸಂಪುಟವು

- 17 ಇಲಾಖೆಗಳಲ್ಲಿನ ನೇರನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ತ್ವರಿತಗತಿಯಲ್ಲಿ ಭರ್ತಿ ಮಾಡಲು ಮೇಲುಸ್ತುವಾರಿಗಾಗಿ ಸರ್ಕಾರದ **ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ಇವರಿಗೆ ಜವಾಬ್ದಾರಿ ನೀಡಿ**,
- 34 ಇಲಾಖೆಗಳಲ್ಲಿನ ನೇರನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ತ್ವರಿತ ಗತಿಯಲ್ಲಿ ಭರ್ತಿ ಮಾಡುವ ಕುರಿತು ಮೇಲುಸ್ತುವಾರಿ ಮಾಡಲು **ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ** ಇವರಿಗೆ ಜವಾಬ್ದಾರಿ ನೀಡಿ ನಿರ್ಣಯಿಸಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: CS/21/GEN/2026, ಬೆಂಗಳೂರು, ದಿನಾಂಕ: 24.06.2026.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಆದೇಶದ **ಅನುಬಂಧ-1 ರಲ್ಲಿ ನಮೂದಿಸಿರುವ 17 ಇಲಾಖೆಗಳ** ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳನ್ನು ತ್ವರಿತಗತಿಯಲ್ಲಿ ಭರ್ತಿ ಮಾಡುವ ಕುರಿತು ಮೇಲುಸ್ತುವಾರಿ ಮಾಡಲು **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ಇವರಿಗೆ ಸಚಿವ ಸಂಪುಟವು ಜವಾಬ್ದಾರಿ ನೀಡಿದೆ**

ಹಾಗೂ

ಈ ಆದೇಶದ **ಅನುಬಂಧ-2 ರಲ್ಲಿ ನಮೂದಿಸಿರುವ 34 ಇಲಾಖೆಗಳ** ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳನ್ನು ತ್ವರಿತಗತಿಯಲ್ಲಿ ಭರ್ತಿ ಮಾಡುವ ಕುರಿತು ಮೇಲುಸ್ತುವಾರಿ ಮಾಡಲು **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇವರಿಗೆ ಸಚಿವ ಸಂಪುಟವು ಜವಾಬ್ದಾರಿ ನೀಡಿ ಆದೇಶಿಸಿದೆ.**

ಮೇಲಿನ ಎಲ್ಲಾ ನೇರ ನೇಮಕಾತಿ ಹುದ್ದೆಗಳಿಗೆ ಮುಂದಿನ 2 ತಿಂಗಳುಗಳಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಲು, ಮುಂದಿನ 4 ತಿಂಗಳುಗಳಲ್ಲಿ ನೇಮಕಾತಿ ಪರೀಕ್ಷೆಗಳನ್ನು ನಡೆಸಲು ಹಾಗೂ ಮುಂದಿನ 6 ತಿಂಗಳುಗಳಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ನೇಮಕಾತಿ ಆದೇಶಗಳನ್ನು ಕಡ್ಡಾಯವಾಗಿ ಹೊರಡಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದೆ.

ಈ ಆದೇಶವನ್ನು ಸಚಿವ ಸಂಪುಟ ಪ್ರಕರಣ ಸಂಖ್ಯೆ:ಸಿ 332/2026 ರಲ್ಲಿ ದಿನಾಂಕ:20.06.2026 ರಂದು ಸಚಿವ ಸಂಪುಟವು ನೀಡಿದ ನಿರ್ದೇಶನದ ಅನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಂದೀಪ್ 24. 6.
24/6/26

**(ಸಂದೀಪ್ ಬಿ.ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ರಾಜಕೀಯ)

**<u>ಇವರಿಗೆ,</u>**

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
5. ಕಾರ್ಯದರ್ಶಿಗಳು, ಕರ್ನಾಟಕ ವಿಧಾನಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು.
6. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು.
7. ಸರ್ಕಾರದ ಅಪರ ಕಾರ್ಯದರ್ಶಿಗಳು , ಸಚಿವ ಸಂಪುಟ ಶಾಖೆ, ಬೆಂಗಳೂರು (ಸಚಿವ ಸಂಪುಟ ವಿಷಯ ಸಂಖ್ಯೆ: ಸಿ332/2026, ದಿನಾಂಕ:20.06.2026)
8. ಜಂಟಿ ನಿರ್ದೇಶಕರು, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ. ರಸ್ತೆ, ಶಿಕ್ಷಕರ ಸದನದ ಪಕ್ಕ, ಬೆಂಗಳೂರು-02.
9. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು.
10. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು

## ಅನುಬಂಧ-1

| ಕ್ರ.ಸಂ. | ಇಲಾಖೆಯ ಹೆಸರು |
|---|---|
| 1. | ಕೃಷಿ ಇಲಾಖೆ |
| 2. | ಪಶುಸಂಗೋಪನೆ ಇಲಾಖೆ |
| 3. | ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ |
| 4. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ |
| 5. | ತೋಟಗಾರಿಕೆ ಇಲಾಖೆ |
| 6. | ರೇಷ್ಮೆ ಇಲಾಖೆ |
| 7. | ಸಣ್ಣ ನೀರಾವರಿ ಇಲಾಖೆ |
| 8. | ಮೀನುಗಾರಿಕೆ ಇಲಾಖೆ |
| 9. | ಸಹಕಾರ ಇಲಾಖೆ |
| 10. | ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ |
| 11. | ಸಮಾಜ ಕಲ್ಯಾಣ ಇಲಾಖೆ |
| 12. | ಪರಿಶಿಷ್ಟ ಪಂಗಡಗಳ ಇಲಾಖೆ |
| 13. | ಜಲಸಂಪನ್ಮೂಲ ಇಲಾಖೆ |
| 14. | ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) |
| 15. | ಕಾರ್ಮಿಕ ಇಲಾಖೆ |
| 16. | ಇಂಧನ ಇಲಾಖೆ |
| 17. | ಲೋಕೋಪಯೋಗಿ ಇಲಾಖೆ |

<u>ಅನುಬಂಧ-2</u>

| ಕ್ರ.ಸಂ. | ಇಲಾಖೆಯ ಹೆಸರು |
|---|---|
| 1. | ಸಿ.ಆ.ಸು. ಇಲಾಖೆ |
| 2. | ಸಿ.ಆ.ಸು. ಇಲಾಖೆ (ಆಡಳಿತ ಸುಧಾರಣೆ-ATI) |
| 3. | ಸಿ.ಆ.ಸು. ಇಲಾಖೆ (ಇ-ಆಡಳಿತ) |
| 4. | ಕೌಶಲ್ಯಾಭಿವೃದ್ಧಿ ಇಲಾಖೆ |
| 5. | ಅರಣ್ಯ ಇಲಾಖೆ |
| 6. | ಕಂದಾಯ ಇಲಾಖೆ |
| 7. | ಆರ್ಥಿಕ ಇಲಾಖೆ |
| 8. | ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ |
| 9. | ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ |
| 10. | ಕೈಮಗ್ಗ ಮತ್ತು ಜವಳಿ ಇಲಾಖೆ |
| 11. | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ |
| 12. | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ |
| 13. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ |
| 14. | ಉನ್ನತ ಶಿಕ್ಷಣ ಇಲಾಖೆ |
| 15. | ಒಳಾಡಳಿತ ಇಲಾಖೆ |
| 16. | ವಸತಿ ಇಲಾಖೆ |
| 17. | ವಾರ್ತಾ ಇಲಾಖೆ |
| 18. | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ |
| 19. | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 20. | ಯೋಜನೆ ಇಲಾಖೆ |
| 21. | ಕಾನೂನು ಇಲಾಖೆ |

| | |
|---|---|
| 22. | ಭಾರಿ ಮತ್ತು ಮಧ್ಯಮ ಕೈಗಾರಿಕೆ |
| 23. | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (MSME) |
| 24. | ವೈದ್ಯಕೀಯ ಶಿಕ್ಷಣ ಇಲಾಖೆ |
| 25. | ಗಣಿ ಇಲಾಖೆ |
| 26. | ಪ್ರವಾಸೋದ್ಯಮ ಇಲಾಖೆ |
| 27. | ಸಾರಿಗೆ ಇಲಾಖೆ |
| 28. | ಸಂಸದೀಯ ವ್ಯವಹಾರಗಳು ಮತು ಶಾಸನ ರಚನಾ ಇಲಾಖೆ |
| 29. | ನಗರಾಭಿವೃದ್ಧಿ ಇಲಾಖೆ |
| 30. | ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆ |
| 31. | ಯುವಜನ ಸೇವಾ ಇಲಾಖೆ |
| 32. | ಬಂದರು, ಒಳನಾಡು ಜಲಸಾರಿಗೆ ಇಲಾಖೆ |
| 33. | ವಿಧಾನಸಭೆ ಸಚಿವಾಲಯ |
| 34. | ಧಾರ್ಮಿಕ ದತ್ತಿ ಇಲಾಖೆ |